**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 3709/2022**

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ದಿವ್ಯ
ತಂದೆಯ ಹೆಸರು :- ಪುಟ್ಟಸ್ವಾಮಿಯ್ಯ
ವಯಸ್ಸು :- 32 ವರ್ಷ
ಉದ್ಯೋಗ :- ಖಾಸಗಿ ಕೆಲಸ
ವಾಸ :- ಚಲಮಸಂದ್ರ

**ಸಾಕ್ಷಿಗೆ ದಿಃ 25.09.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

17.02.2022 ರಂದು ಬೆಳಿಗ್ಗೆ 8.30 ಗಂಟೆಯ ಸಮಯದಲ್ಲಿ ಸೀಟ್ ಹಾಕಿಲು ಮನೆಯ ಹತ್ತಿರ ಆಳುಗಳು ಬಂದಿದ್ದು ಆರೋಪಿ 3 ರಿಂದ 5 ಅವರ ತಂದೆಯ ಜಮೀನಿನಲ್ಲಿ ಭಾಗ ಬೇಕೆಂದು ನನ್ನ ತಾಯಿಯನ್ನು ಬೈದಿರುತ್ತಾರೆ. ಆರೋಪಿ 1 ಮತ್ತು 2 ದೊಣ್ಣೆಯಿಂದ ನನಗೆ ಮತ್ತು ನನ್ನ ತಾಯಿಗೆ ಹೊಡೆಯಲು ಬಂದಿದ್ದು ಆರೋಪಿ 3 ಕಲ್ಲಿನಿಂದ ನನ್ನ ತಾಯಿಯ ಬೆನ್ನಿಗೆ ಮತ್ತು ಕಾಲಿಗೆ ಹೊಡೆದಿರುತ್ತಾರೆ. ನಾನು ಬಿಡಿಸಲು ಹೋದಾಗ ನನಗೂ ಸಹ ಆರೋಪಿ 3 ಕಲ್ಲಿನಿಂದ ಕೈ ಮೇಲೆ ಹೊಡೆದಿರುತ್ತಾರೆ. ಆರೋಪಿ 1 ಮತ್ತು 2 ದೊಣ್ಣೆಯಿಂದ ಹೊಡೆಯಲು ಬಂದಾಗ ಚಾ.ಸಾ. 3 ಮತ್ತು 4 ಜಗಳ ಬಿಡಿಸಿರುತ್ತಾರೆ. ನಂತರ ದೂರನ್ನು ನೀಡಿರುತ್ತೇವೆ. ನನ್ನ ತಾಯಿಯನ್ನು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಚಿಕಿತ್ಸೆ ಕೊಡಿಸಿರುತ್ತೇವೆ.

ಊರಿನ ಹಿರಿಯರು ರಾಜಿ ಮಾಡಿಸುತ್ತೇನೆಂದು ಹೇಳಿದ್ದರಿಂದ ನಾವು ಸುಮ್ಮನಿದ್ದು ನಂತರ ಆರೋಪಿತರೂ ನಮ್ಮ ವಿರುದ್ದ ದೂರು ನೀಡಿದ ಕಾರಣನಾವು ದಿಃ 05.03.2022 ದೂರನ್ನು ನೀಡಿರುತ್ತೇವೆ. ಆರೋಪಿತರನ್ನು ಮತ್ತು ಮು. ಮಾ. ಗಳನ್ನ ಗುರುತಿಸುತ್ತೇನೆ. ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು  ಭಾಗಶಃ ಪ್ರತಿಕೂಲ ಸಾಕ್ಷಿಯೆಂದು  ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ಆರೋಪಿ 3 ರಿಂದ 5 ಅವರು ಮನೆಯ ಸೈಟಿನ ವಿಚಾರವಾಗಿ ಅವರಿಗೂ ಭಾಗ ಬರಬೇಕು ಎಂದು ಆಗಾಗ ಜಗಳ ಮಾಡುತ್ತಿದ್ದರು ಎಂದರೆ ಸರಿ. ನಾವು ಸೀಟ್‌ನ್ನು ಹಾಕಿಸಲೆಂದು ಸೀಟ್ ತೆಗೆದಾಗ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ಅಲ್ಲಿಗೆ ಬಂದಿರುತ್ತಾರೆಂದರೆ ಸರಿ. ನನ್ನ ತಾಯಿಗೆ ಎಲ್ಲರೂ ಸೇರಿ ಅವ್ಯಾವಲು ಬ್ದಗಳಿಂದ ಬೈದಿರುತ್ತಾರೆ ಎಂದರೆಸರಿ.

ಆರೋಪಿ 3 ರಿಂದ 5 ಅವರು  ಅವರು ನನ್ನ ತಾಯಿಯನ್ನ ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ಕಲ್ಲಿನಿಂದ ಮೈಕೈಗೆ ಗುದ್ದಿರುತ್ತಾರೆ ಎಂದರೆ ಸರಿ.  ನಾನು ಜಗಳ ಬಿಡಿಸಲು ಬಂದಾಗ ಅವರಿಗೂ ಎಳೆದಾಡಿ ಕಲ್ಲಿನಿಂದ ಗುದ್ದಿ ನೋವುಂಟು ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರೂ ನಮಗೆ ಜೀವ ಬೆದರಿಕೆ ಹಾಕಿ ಕಲ್ಲನ್ನು ಅಲ್ಲಿಯೇ ಬಿಸಾಡಿ ಹೋಗಿರುತ್ತಾರೆಂದರೆ ಸರಿ. ನಾನು ಸಹ ಖಾಸಗಿ ಕ್ಲಿನಿಕ್ ನಲ್ಲಿ ಮೈ ಕೈ ನೋವಿನ ಮಾತ್ರೆ ತೆಗೆದುಕೊಂಡಿರುತ್ತೇನೆಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿಗಳ ಪರಃ ಎನ್.ಎ. ವಕೀಲರಿಂದಃ</u>**

ಆರೋಪಿ 1 ಮತ್ತು 2  ದೊಣ್ಣೆಯಿಂದ ಹೊಡೆದಿರುತ್ತಾರೆ. ದೊಣ್ಣೆ ಯಾವ ಜಾತಿಯ ಮರದೆಂದು ನನಗೆ ಗೊತ್ತಿಲ್ಲ. ಸದರಿ ದೊಣ್ಣೆ ಅರ್ಧ ಮಾರ ಇತ್ತು.  ಆರೋಪಿ 1 ಮತ್ತು 2 ಅವರು ಬೇರೆ ಬೇರೆ ದೊಣ್ಣೆಗಳನ್ನು ಹಿಡಿದುಕೊಂಡಿದ್ದರು. ದೊಣ್ಣೆಗಳು ತುರುಬೇವಿನ ಮರದ ಜಾತಿಯವು ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ದೊಣ್ಣೆಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ. ಸದರಿ ದೊಣ್ಣೆಗಳನ್ನು ನಾವು ಪೊಲಿಸರಿಗೆ ನೀಡಿರುತ್ತೇವೆ. ಕಲ್ಲು ಕಾಡು ಕಲ್ಲಾಗಿದ್ದು ಒಂದು ಮುಷ್ಟಿಯಷ್ಟು ದಪ್ಪ ಇರುತ್ತದೆ. ದೊಣ್ಣೆಯಿಂದ ಹೊಡೆದಾಗ ನನ್ನ ತಾಯಿಗೆ ಬಲಗೈ ಮುಂಗೈಗೆ ರಕ್ತ ಗಾಯ ಆಗಿತ್ತು ಎಂದು ಹೇಳುತ್ತಾರೆ. ಸದರಿ ರಕ್ತ ನನ್ನ ತಾಯಿಯ ಸೀರೆ ಮೇಲೆ ಬಿದ್ದಿತ್ತು. ಸದರಿ ಸೀರೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ.

ಹು.ದುರ್ಗ ಪ್ರಶಾಂತ ಕ್ಲಿನಿಕ್ ನಲ್ಲಿ ನನ್ನ ತಾಯಿ ಚಿಕಿತ್ಸೆ ಪಡೆದಿರುತ್ತಾರೆಂದು ಹೇಳುತ್ತಾರೆ. ನಮ್ಮ ಊರಿನಿಂದ ನಿಡಸಾಲೆ ಗ್ರಾಮ 3 ಕೀಮೀ ಆಗುತ್ತದೆಂದು ಹೇಳುತ್ತಾರೆ.

ನಿಡಸಾಲೆ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಅಲ್ಲಿಯೂ ಸಹ ವೈದ್ಯರು ಇರುತ್ತಾರೆಂದರೆ ಸಾಕ್ಷಿ ಅವರು ಸರಿಯಾಗಿ ಬರುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಊರಿನಿಂದ ಹು.ದುರ್ಗ 16 ಕೀ ಮೀ ದೂರದಲ್ಲಿದೆ ಎಂದು ಹೇಳುತ್ತಾರೆ. ಹು.ದುರ್ಗದಲ್ಲಿಯೂ ಸಹ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ 2 ರಿಂದ 3 ಜನ ವೈದ್ಯರು ಇರುತ್ತಾರೆಂದರೆ ಸರಿ. ಸದರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಯಾವುದೇ ತೊಂದರೆ ಇರಲಿಲ್ಲವೆಂದರೆ ಸಾಕ್ಷಿ ನನ್ನ ತಾಯಿಗೆ ಶುಗರ ಕಾಯಿಲೆ ಇದ್ದು ಬೇಗ ಗಾಯ ಆಗುತ್ತದೆಂದು ಹೇಳುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿಯೂ ಸಹ ಚನ್ನಾಗಿ ಚಿಕಿತ್ಸೆ ನೀಡುತ್ತಿದ್ದು ನಾವು ಸುಳ್ಳು ಗಾಯದ ಪ್ರಮಾಣ ಪತ್ರ ಪಡೆಯುುವ ಉದ್ದೇಶದಿಂದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆಂದರೆ ಸರಿಯಲ್ಲ. ಖಾಸಗಿ ಆಸ್ಪತ್ರೆಯ ವೈದ್ಯರು ಗಾಯದ ಪ್ರಮಾಣ ಪತ್ರ ನೀಡಿರುವುದಿಲ್ಲ.

ನನ್ನ ತಾಯಿಯ ಕಲ್ಲಿನಿಂದ ಬೆನ್ನಿಗೆ ಎಡಗಾಲಿಗೆ ಮತ್ತು ಮುಂಗೈಗೆ ಹೊಡೆದಿರುತ್ತಾರೆ. ಆರೋಪಿ 3 ಕಲ್ಲಿನಿಂದ ನನ್ನ ತಾಯಿಗೆ ಹೊಡೆದಿರುತ್ತಾರೆ. ಸದರಿ ಕಲ್ಲನ್ನು ಬಲಗೈಯಲ್ಲಿ ಹಿಡಿದುಕೊಂಡು ಹೊಡೆದಿರತ್ತಾರೆಂದು ಹೇಳುತ್ತಾರೆ. ಕಲ್ಲಿನಿಂದ ಹೊಡೆದಾಗ ಬಟ್ಟೆ ರಕ್ತ ಕಲೆ ಮತ್ತು ರಕ್ತ ಗಾಯ ಆಗಿತ್ತು. ಆರೋಪಿ 4 ಮತ್ತು 5 ನಾನು ಜಗಳ ಬಿಡಿಸಲು ಹೋದಾಗ ನನಗೂ ಸಹ ಕಲ್ಲಿನಿಂದ ಹೊಡೆದಿರುತ್ತಾರೆಂದು ಹೇಳುತ್ತಾರೆ. ಅದೇ ಕಲ್ಲಿನಿಂದ ಹೊಡೆದಿರುತ್ತಾರೆ. ನನಗೆ ಕೈಗೆ ಮತ್ತು ಬೆನ್ನಿಗೆ ಹೊಡೆದಿದ್ದು ನೀಲಿ ಗಟ್ಟಿದ ಗಾಯ ಆಗಿತ್ತು ರಕ್ತ ಬಂದಿರುವುದಿಲ್ಲ. ನಾನು ಸಹ ನನ್ನ ತಾಯಿಗೆ ತೋರಿಸಿದ ಖಾಸಗಿ ಆಸ್ಪತ್ರೆಯಲ್ಲಿ ಮಾತ್ರೆ ತೆಗೆದುಕೊಂಡಿರುತ್ತೇನೆ.

ನಾನು ಪೊಲಿಸರಿಗೆ ವೈದ್ಯರಿಂದ ಗಾಯದ ಪ್ರಮಾಣ ಪತ್ರ ನೀಡಿರುವುದಿಲ್ಲ. ಗಲಾಟೆ ಆದ ಸಮಯದಲ್ಲಿ 10 ರಿಂದ 15 ಜನ ಇದ್ದರು. ಅವರ ಹೆಸರುಗಳೆಂದರೆ ರಮೇಶ್, ನಿಂಗಣ್ಣ ಇನ್ನೂ ಮುಂತಾದವರು ಇದ್ದರು. ನಮ್ಮ ಮನೆಯಿಂದ 5 ರಿಂದ 6 ಮನೆಗಳನ್ನು ಬಿಟ್ಟ ನಂತರ ಚಾ.ಸಾ. 3 ಮತ್ತು 4 ಅವರ ಮನೆ ಬರುತ್ತದೆ ಎಂದು ಹೇಳುತ್ತಾರೆ. ನಮ್ಮ ಮನೆಯ ಅಕ್ಕಪಕ್ಕ ಪುಟ್ಟಸಾಮಯ್ಯ, ಶಿವಲಿಂಗಮ್ಮ, ಸುಜಾತಾ ಸತಿಶ್, ಅಶೋಕ್, ರಾಜೇಶ, ಅಪ್ಪಾಜಿಗೌಡ ಅವರ ಮನೆಗಳು ಇರುತ್ತವೆ. ನಮ್ಮ ಮನೆಯ ಹತ್ತಿರ ಗಲಾಟೆ ಆದಲ್ಲಿ ಈ ಮೇಲೆ ಹೇಳಿದ ಮನೆಗಳಿಗೆ ಕೇಳಿಸುತ್ತೇದೆ. ಅವರು ಯಾರು ಜಗಳ ಬಿಡಿಸಲು ಬಂದಿರುವುದಿಲ್ಲ. ಗಲಾಟೆ ಆದ ವಿಚಾರ ನಾನು ಹೇಳಿದ ಇತರರಿಗೆ ಗೊತ್ತು ಅವರೂ ಸಹ ನೋಡಿರುತ್ತಾರೆಂದರೆ ಸರಿ. ನಾವು ದೂರಿನಲ್ಲಿ ಎಲ್ಲರ ಹೆಸರುಗಳನ್ನು ಹೇಳಿಲ್ಲ ಜಗಳ

ಬಿಡಿಸಿದವರ ಹೆಸರನ್ನು ಮಾತ್ರ ಹೇಳಿರುತ್ತೇವೆ. ಚಾ.ಸಾ. 3 ಮತ್ತು 4 ನಮ್ಮ ಕುಟುಂಬಕ್ಕೆ ಆತ್ಮೀಯರು ನಮ್ಮ ಮಾತುಗಳನ್ನು ಕೇಳುತ್ತಾರೆಂದರೆ ಸರಿಯಲ್ಲ. ಆದ ಕಾರಣ ಅವರ ಹೆಸರುಗಳನ್ನು ಮಾತ್ರ ದೂರಿನಲ್ಲಿ ಹೇಳಿರುತ್ತೆವೆ ಎಂದರೆ ಸರಿಯಲ್ಲ.

ಗಲಾಟೆ ಆದ ದಿನವೇ ದೂರನ್ನು ನೀಡಲು ತೊಂದರೆ ಇರಲಿಲ್ಲ ನಮ್ಮ ಊರಿನ ಹಿರಿಯರಾದ ಜಯರಾಮಣ್ಣ ಮತ್ತು ಅಪ್ಪಜಿಗೌಡ ಅವರು ರಾಜಿ ಪಂಚಾಯಿತಿ ಮಾಡುವುದಾಗಿ ಹೇಳಿರುತ್ತಾರೆ. ಅವರು ಊರಿನ ಹಿರಿಯರು ಆಗಿರುತ್ತಾರೆ. 5 ಜನ ನಮ್ಮಊರಿನಲ್ಲಿ ರಾಜಿ ಪಂಚಾಯಿತಿ ಮಾಡಿರುತ್ತಾರೆ. ನಾವು ಜಯರಾಮಣ್ಣ ಮತ್ತು ಅಪ್ಪಜಿಗೌಡ, ನನ್ನ ಸೋದರ ಮಾವ ಸೇರಿದ್ದು ಆರೋಪಿತರನ್ನು ಕರೆಸಲು ಹೇಳಿದ್ದು ಅವರು ರಾಜಿ ಮಾಡಿಕೊಳ್ಳುವುದಿಲ್ಲ ದೂರನ್ನು ಕೂಡುವಂತೆ ಹೇಳಿರುತ್ತಾರೆಂದು ಹೇಳುತ್ತಾರೆ.

ನಾನು ಹೇಳಿರುವಂತೆ ಆರೋಪಿತರೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ ನಮಗೆ ಹೊಡೆದಿಲ್ಲ ನನಗೆ ಮತ್ತು ನನ್ನ ತಾಯಿಗೆ ಯಾವುದೇ ಗಾಯಗಳು ಆಗಿಲ್ಲವೆಂದರೆ ಸರಿಯಲ್ಲ. ನಾನು ನನ್ನ ತಾಯಿ ಮತ್ತು ಇತರರು ಸೇರಿ ಈ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇವೆ ಎಂದರೆಸರಿ. ಸದರಿ ದೂರನ್ನು ಆರೋಪತರೂ ನೀಡಿರುತ್ತಾರೆಂದರೆ ಸರಿ. ಆರೋಪಿತರೂ ದೂರನ್ನು ಕೊಟ್ಟ ಬಳಿಕ ನಾವು ಈ ದೂರನ್ನು ಕೊಟ್ಟಿರುತ್ತೇವೆ. ನಾವು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ದೂರನ್ನು ನೀಡಿರುತ್ತೇವೆಂದು ಹೇಳುತ್ತಾರೆ. ನಾನು ಹೇಳಿದ ರೀತಿ ಯಾವುದೇ ಘಟನೆ ನಡೆದಿಲ್ಲ ಯಾವುದೇ ರಾಜಿ ಪಂಚಾಯಿತಿ ಸಹ ನಡೆದಿಲ್ಲ ಸುಳ್ಳು ದೂರನ್ನು ನೀಡುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೂ ಕಲ್ಲಿನಿಂದ ಹೊಡೆದಿಲ್ಲ ನಾವೇ ಪೋಲಿಸರಿಗೆ ಕಲ್ಲನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**